ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 56-60
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸ್ತ್ರೀವಾದಿ ಸಾಹಿತ್ಯ ಸಂಶೋಧನೆ ನೆಲೆಯಲ್ಲಿ ಹೊಸ ಸಾಧ್ಯತೆಗಳು; ರಾಜಕೀಯ, ಆರ್ಥಿಕ, ಸಾಮಾಜಿಕ ನೆಲೆಯಲ್ಲಿ ಮೋಟಮ್ಮ ಅವರ ಆತ್ಮಕಥೆ

**ಸಿದ್ದನಾಗಪ್ಪ ಬಿ. ಬಿ**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

***Abstract:***
*ಮಾನವನ ಜೀವನವು ನೋವು–ನಲಿವು, ಸುಖ–ದುಃಖ, ಒಳಿತು–ಕೆಡುಕುಗಳ ಮಿಶ್ರಣ. ದಿನನಿತ್ಯದ ಬದುಕು ಸಮತೋಲನವಾಗಿರದೆ ಅನೇಕ ಏರಿಳಿತಗಳಿಂದ ಕೂಡಿರುತ್ತದೆ. ವಿಶೇಷ ಎನಿಸಿದ ಅನೇಕ ಘಟನೆಗಳು ಸ್ಮೃತಿಪಟಲದಲ್ಲಿದ್ದು ಅವುಗಳನ್ನು ದಾಖಲಿಸುವ ಪ್ರಯತ್ನಗಳು ಕೂಡ ನಡೆಯುತ್ತಿದೆ. ಇವುಗಳ ಅಭಿವ್ಯಕ್ತಿಗಳೇ ಆತ್ಮಕಥೆ. ತನ್ನಾಳದ ನೋವು–ನಲಿವುಗಳ ಸಮತೋಲಿತ ಚಿತ್ರಣವೇ ಆತ್ಮಕಥೆ. ಒಬ್ಬ ವ್ಯಕ್ತಿ ತನ್ನ ಜೀವನದ ಚರಿತ್ರೆಯನ್ನು ತಾನೇ ಬರೆದರೆ ಅದೇ ಆತ್ಮಕಥೆ. ಅದೇ ವ್ಯಕ್ತಿಯ ಜೀವನದ ಘಟನೆಯನ್ನು ಕುರಿತು ಬೇರೊಬ್ಬ ವ್ಯಕ್ತಿ ಬರೆದಾಗ ಅದು ಜೀವನಚರಿತ್ರೆ. ಆತ್ಮಕಥೆಯು ಆಧುನಿಕ ಕನ್ನಡ ಗದ್ಯಸಾಹಿತ್ಯದ ಒಂದು ಪ್ರಕಾರವಾಗಿದೆ. ಸ್ತ್ರೀವಾದಿ ಸಾಹಿತ್ಯದಲ್ಲಿ ಮಹಿಳಾ ಆತ್ಮಕಥೆಗಳ ಅಧ್ಯಯನವೂ ಕೂಡ ಬಹು ಮುಖ್ಯವಾಗಿದೆ. ಹೀಗೆ ಬಂದಿರುವ ಮಹಿಳಾ ಆತ್ಮಕಥೆಗಳಲ್ಲಿ ಮೋಟಮ್ಮಅವರ 'ಬಿದಿರು ನೀನ್ಯಾರಿಗಲ್ಲದವಳು' ಎಂಬ ಆತ್ಮಕಥೆಯು ಒಂದಾಗಿದೆ. ವೀರಣ್ಣ ಕಮ್ಮಾರ ಅವರ ನಿರೂಪಣೆಯಲ್ಲಿ ಬಂದಿರುವ ಈ ಆತ್ಮಕಥೆಯನ್ನು ಪ್ರಸ್ತುತ ಪ್ರಬಂಧದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ಹಿನ್ನೆಲೆಯಲ್ಲಿ ನೋಡಲಾಗಿದೆ.*

**Keywords:** *ಸ್ತ್ರೀವಾದಿ ಸಾಹಿತ್ಯ, ಸಂಶೋಧನೆ, ಮೋಟಮ್ಮ, ರಾಜಕೀಯ ನಾಯಕಿ, ಆತ್ಮಕಥೆ.*

## ಪೀಠಿಕೆ

ಮೋಟಮ್ಮ ಅವರು ಮಲೆನಾಡಿನ ಪುಟ್ಟ ಊರಿನಿಂದ ಬಂದು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರುವ ಧೀಮಂತ ರಾಜಕೀಯ ನಾಯಕಿ ಎಂದು ಹೇಳಬಹುದು ಹಾಗೂ ಸ್ತ್ರೀ ಅಸ್ತಿತ್ವದ ಪ್ರತಿಬಿಂಬವಾಗಿಯೂ ಮೋಟಮ್ಮ ಅವರು ಕಾಣುತ್ತಾರೆ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಕೆಸವೂಳಲು ಗ್ರಾಮದಲ್ಲಿನ ಸಣ್ಣಯ್ಯ ಮತ್ತು ವಸಂತಮ್ಮ ದಂಪತಿಯ ನಾಲ್ಕು ಜನ ಮಕ್ಕಳಲ್ಲಿ ಮೋಟಮ್ಮ ಅವರು ಕೊನೆಯ ಪುತ್ರಿಯಾಗಿ 1951ರಲ್ಲಿ ಜನಿಸಿದರು. ತಂದೆಗೆ ನಾಲ್ಕನೇ ಮಗು ಗಂಡಾಗಬೇಕೆಂಬ ಆಸೆ ಇತ್ತು. ಈ ಕಾರಣದಿಂದಾಗಿ ಮೋಟಮ್ಮ ಅವರಿಗೆ ಹೆಸರನ್ನು ಇಡಲು ಇಚ್ಛಿಸಲಿಲ್ಲ. ಮೋಟಮ್ಮ ಅವರು ದುಂಡಗೆ, ದಪ್ಪಗೆ ಇದ್ದ ಕಾರಣ ಎಲ್ಲರೂ ಮೋಟು–ಮೋಟು ಅಂತಾನೇ ಕರೆಯುತ್ತಿದ್ದರಿಂದ ಮೋಟಮ್ಮ ಎಂಬ ಹೆಸರು ರೂಢಿಯಾಯಿತು. ಅಪ್ಪನಿಂದ ತಾತ್ಸಾರಕ್ಕೆ ಒಳಗಾದರೂ ಮನೆಯ ನೆರೆಹೊರೆಯವರ ಹಾಗೂ ಹಳ್ಳಿಯವರ ಪ್ರೀತಿಯಲ್ಲಿ ಬಾಲ್ಯವನ್ನು ಕಳೆದರು.

***Please cite this article as:*** ಸಿದ್ದನಾಗಪ್ಪ ಬಿ. ಬಿ. (2024). ಸ್ತ್ರೀವಾದಿ ಸಾಹಿತ್ಯ ಸಂಶೋಧನೆ ನೆಲೆಯಲ್ಲಿ ಹೊಸ ಸಾಧ್ಯತೆಗಳು; ರಾಜಕೀಯ, ಆರ್ಥಿಕ, ಸಾಮಾಜಿಕ ನೆಲೆಯಲ್ಲಿ ಮೋಟಮ್ಮ ಅವರ ಆತ್ಮಕಥೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 3(3), 56–60

ಓದಿನಲ್ಲಿ ಮತ್ತು ಕ್ರೀಡೆಯಲ್ಲಿ ಮುಂದೆ ಇದ್ದ ಇವರು ಬಿ.ಎ, ಎಂ.ಎ ಪದವಿಯನ್ನು ಪಡೆದರು. ನಂತರ 1976ರಲ್ಲಿ ಸಬ್‌ರಿಜಿಸ್ಟ್ರಾರ್ ಆಗಿ ನೇಮಕವಾದರು. ವಿದ್ಯಾರ್ಥಿ ಜೀವನದಲ್ಲಿಯೇ ವಸತಿನಿಲಯದ ಕುಂದುಕೊರತೆಗಳ ಬಗ್ಗೆ ಧ್ವನಿ ಎತ್ತುತ್ತಿದ್ದ ಅವರ ಮನದಲ್ಲಿ ಮೂಡುತ್ತಿದ್ದ ಸಾಮಾಜಿಕ ಕಳಕಳಿಯು ಮುಂದೆ ರಾಜಕೀಯದಲ್ಲಿ ಬೆಳೆಯಲು ಅವಕಾಶ ಮಾಡಿಕೊಟ್ಟಿತು.

ಭಾರತದಲ್ಲಿ ಇಂದಿರಾ ಕಾಂಗ್ರೆಸ್ ಮತ್ತು ಬ್ರಹ್ಮಾನಂದರೆಡ್ಡಿ ಕಾಂಗ್ರೆಸ್ ಎಂದು 1977ರಲ್ಲಿ ಕಾಂಗ್ರೆಸ್ ಇಬ್ಭಾಗವಾಯಿತು. ಕರ್ನಾಟಕದಲ್ಲಿ ಹೆಚ್.ಕೆ ಪಾಟೀಲರು ಬ್ರಹ್ಮಾನಂದರೆಡ್ಡಿ ಪರವಾಗಿದ್ದರೆ, ದೇವರಾಜು ಅರಸು ಅವರು ಇಂದಿರಾಗಾಂಧಿ ಅವರ ಪರ ಇದ್ದರು. ಮೂಡಿಗೆರೆಯ ಶಾಸಕ ಜಿ. ಪುಟ್ಟಸ್ವಾಮಿ ಅವರು ರೆಡ್ಡಿ ಕಾಂಗ್ರೆಸ್‌ಗೆ ಸೇರಿದರು. ಇಂದಿರಾಗಾಂಧಿ ಕಾಂಗ್ರೆಸ್ ಪರವಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಸೂಕ್ತ ಅಭ್ಯರ್ಥಿಗಳಿಲ್ಲದ ಕಾರಣ ಮಾಜಿ ಶಾಸಕಿಯಾದ ಶ್ರೀಮತಿ ಬಿ.ಎಲ್. ಸುಬ್ಬಮ್ಮ ಅವರು ಮೋಟಮ್ಮ ಅವರ ಕಛೇರಿಗೆ ಬಂದು "ಏನಮ್ಮಾ ನೀನ್ಯಾಕೆ ಚುನಾವಣೆಗೆ ನಿಲ್ಲಬಾರದು"[1] ಎಂದು ಕೇಳಿದರು. ಮೋಟಮ್ಮ ಅವರಿಗೆ ಆಶ್ಚರ್ಯವಾಯಿತು. ಒಳ್ಳೆಯ ಆಫೀಸರ್ ಆಗಬೇಕೆಂಬ ಗುರಿ ಇಟ್ಟುಕೊಂಡಿದ್ದ ಅವರು ಆಲೋಚಿಸದೇ ಯಾವುದೇ ನಿರ್ಧಾರವನ್ನು ಆತುರಾತುರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಕೆಲವು ನಿರ್ಧಾರವನ್ನಂತು ತೆಗೆದುಕೊಳ್ಳಲು ಬಹಳಷ್ಟು ಆಲೋಚಿಸುತ್ತಿದ್ದರು. ಅವರ ಸ್ಥಿರ ಆಲೋಚನೆ, ದೃಢನಿರ್ಧಾರವಿದ್ದರೂ ಒಮ್ಮೊಮ್ಮೆ ನಿರ್ಧಾರ ಕೈಗೊಳ್ಳುವಲ್ಲಿ ಗೊಂದಲದ ಮನಸ್ಥಿತಿಯನ್ನು ಹೊಂದಿರುತ್ತಿದ್ದನ್ನು ಕುರಿತು ಇಲಾಖೆಯ ಮೇಲಾಧಿಕಾರಿಯಾಗಿದ್ದ ತಿಮ್ಮಯ್ಯ ಅವರು ಈ ರೀತಿ ಹೇಳಿದ್ದಾರೆ, "ಏನಮ್ಮ ನೀನು ಚುನಾವಣೆಗೂ ನಿಲ್ಲು ಅಂದ್ರೆ ನಿಲ್ಲೋದಿಲ್ಲ ಅಂತೀಯ. ನಾವು ತೋರಿಸಿದ ಹುಡುಗನ್ನ ಮದುವೆಯಾಗು ಅಂದ್ರೆ ಆಗೋಲ್ಲ ಅಂತೀಯ. ಡಿಪಾರ್ಟ್‌ಮೆಂಟ್ ಪರೀಕ್ಷೆಗಳನ್ನು ಪಾಸು ಮಾಡೋದಿಲ್ಲ ಮತ್ತೆ ಏನಮ್ಮಾ ಮಾಡ್ತೀಯಾ"[2] ಎಂದು ಕೇಳುತ್ತಿದ್ದ ಪ್ರಶ್ನೆಗಳಿಗೆ ಮೋಟಮ್ಮನವರು 'ರಾಜಕೀಯದಲ್ಲಿ ಯಾವುದೇ ಆಸಕ್ತಿಯಿಲ್ಲ' ಎಂದು ಹೇಳಿದ್ದರು. ಬಡತನದಲ್ಲಿದ್ದ ಅವರ ಕುಟುಂಬವನ್ನು ನಿರ್ವಹಿಸಲು ಸರ್ಕಾರಿ ನೌಕರಿ ಅಗತ್ಯವೆಂದು ತಿಳಿದಿದ್ದರು. ಆದರೆ ಆಕಸ್ಮಿಕವಾಗಿ ಚುನಾವಣೆಗೆ ಸ್ಪರ್ಧಿಸುವಂತೆ ಶ್ರೀಮತಿ ಬಿ.ಎಲ್. ಸುಬ್ಬಮ್ಮ ಅವರು ಕೇಳಿಕೊಂಡರು. ಇದರ ಬಗ್ಗೆ ಚಿಂತಿಸುತ್ತಿದ್ದ ಮೋಟಮ್ಮ ಅವರಿಗೆ ಅವರ ಸಹೋದ್ಯೋಗಿಯಾದ ರಾಮಚಂದ್ರನಾಯಕ್ ಅವರು ಚುನಾವಣೆಗೆ ಸ್ಪರ್ಧಿಸುವಂತೆ ತಿಳಿ ಹೇಳಿದರು. ಶಾಸ್ತ್ರ ಸಂಪ್ರದಾಯವನ್ನು ಪಾಲಿಸುವವರು ಯಾವುದೇ ಕೆಲಸವನ್ನು ಕೈಗೊಳ್ಳುವ ಮೊದಲು ಜ್ಯೋತಿಷ್ಯರನ್ನು ಕೇಳುವ ಪದ್ಧತಿಯಿರುತ್ತದೆ. ಅದರಲ್ಲಿ ಮೋಟಮ್ಮ ಅವರ ರಾಜಕೀಯ ಪ್ರವೇಶ ಹೊರತೇನಲ್ಲ. ರಾಮಚಂದ್ರನಾಯಕ್ ಅವರು ಕೋಡಿಮಠದ ಶ್ರೀಗಳ ಸಮೀಪ ಕರೆದುಕೊಂಡು ಹೋದರು. ಮೊದಲೇ ಮೋಟಮ್ಮ ಅವರಿಗೆ ನಾಮಕರಣ ಮಾಡದ ಕಾರಣ ಒಂದು ಹೂವಿನ ಹೆಸರನ್ನು ಸೂಚಿಸಲು ಶ್ರೀಗಳು ತಿಳಿಸಿದರು. ಮಲ್ಲಿಗೆ ಹೂವನ್ನು ಆಯ್ಕೆ ಮಾಡಿದ ಮೋಟಮ್ಮ ಅವರಿಗೆ "ರಾಜಕೀಯಂರಜೇಕ ಬಂಧನಂ"[3] ಎಂದು ಬಂದಿದ್ದ ಕಾರಣ ನೀವು ರಾಜಕೀಯಕ್ಕಿಂತ ಸರ್ಕಾರಿ ಹುದ್ದೆಯಲ್ಲಿ ಮುಂದುವರಿಯುವಿರಿ ಎಂಬ ಸೂಚನೆಯ ಮೇರೆಗೆ ರಾಜಕೀಯ ಪ್ರವೇಶವು ಬೇಡ ಎಂದು ತಿರ್ಮಾನಿಸಿ ಮನಸ್ಸನ್ನು ನಿರಾಳವಾಗಿಸಿ ಕೊಂಡರು. ಆದರೆ ಚಂದ್ರೇಗೌಡರು ಅವರ ಮನೆಗೆ ಮತ್ತೊಬ್ಬ ಜ್ಯೋತಿಷಿಯನ್ನು ಕರೆಯಿಸಿ ಕೇಳಿದಾಗ ಮೊದಲು

---

[1] ಬಿದಿರು ನೀನ್ಯಾರಿಗಲ್ಲದವಳು, ಮೋಟಮ್ಮ (ನಿ.ವೀರಣ್ಣಕಮ್ಮಾರ) ವಿಕಾಸ ಪ್ರಕಾಶನ, ಬೆಂಗಳೂರು. 2022 ಪು.ಸಂ 117

[2] ಅದೇ. ಪುಟ. 118

[3] ಅದೇ.ಪುಟ. 123

ಕೇಳಿದ ಶಾಸ್ತ್ರಕ್ಕೂ ಇವರು ಹೇಳಿದ ಶಾಸ್ತ್ರಕ್ಕೂ ತದ್ವಿರುದ್ಧವಾಗಿತ್ತು. 'ರಾಜಕೀಯಂರಜೇಕ ಬಂಧನಂ' ಎಂದರೆ 'ರಾಜಕೀಯಕ್ಕೆ ಬಂಧಿಸಲ್ಪಡುವುದು' ಎಂಬ ಅರ್ಥವನ್ನು ನೀಡಿ ಅದರ ಬಗ್ಗೆ ಒಳ್ಳೆಯ ಭಾವನೆಯನ್ನು ನೀಡಿದರು. ಇದಕ್ಕೆ ಉತ್ತರವಾಗಿ ಮೋಟಮ್ಮ ಅವರು 1978ರ ಚುನಾವಣೆಯಲ್ಲಿ 18,232 ಮತಗಳ ಅಂತರದಿಂದ ಮೂಡಿಗೆರೆಯ ಕ್ಷೇತ್ರದಿಂದ ಆಯ್ಕೆಯಾದರು. ಹೀಗೆ ಮೋಟಮ್ಮ ಅವರ ರಾಜಕೀಯ ಪ್ರವೇಶ ಆಕಸ್ಮಿಕವಾದರೂ ಸೇವಾ ಮನೋಭಾವನೆಯಿಂದ ಅಭಿವೃದ್ಧಿಯನ್ನೆ ಮಾನದಂಡವಾಗಿಸಿಕೊಂಡು ರಾಜಕೀಯ ಪಟುವಾದರು.

ಮೋಟಮ್ಮ ಅವರು ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಹಲವಾರು ಯೋಜನೆಗಳನ್ನು ಜಾರಿಗೆ ತಂದರು. ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೆ ತಂದ ಸಂದರ್ಭದಲ್ಲಿ ಭಾರತದೇಶದ ಸ್ತ್ರೀಯರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ತೀರ ಕಷ್ಟದ ವಿಷಯವಾಗಿತ್ತು. ಹಾಗಾಗಿ ಸ್ತ್ರೀಯರನ್ನು ಆರ್ಥಿಕವಾಗಿ ಸಬಲರಾಗಿ ಮಾಡುವುದು ಮೋಟಮ್ಮ ಅವರ ಮೊದಲ ಉದ್ದೇಶವಾಗಿತ್ತು. ಈ ಕಾರಣದಿಂದ 'ಸಂತೆಗಾಗಿ ಸಾಲ' ಎಂಬ ಯೋಜನೆಯನ್ನು ಜಾರಿಗೆ ತಂದರು. ಇದರಿಂದ ಮಹಿಳೆಯರಿಗೆ ಸ್ವ ಉದ್ಯೋಗ ಮಾಡಲು ತಲಾ 'ಐವತ್ತು ಸಾವಿರ' ರೂಪಾಯಿಗಳ ಸಹಾಯಧನವನ್ನು ಕೊಡುವ ಮೂಲಕ ಪ್ರೋತ್ಸಾಹಿಸಿದರು. ಹಾಗೆಯೇ ಮಹಿಳೆಯರಲ್ಲಿ ಸಹಕಾರ, ಒಗ್ಗಟ್ಟಿನ ಮನೋಭಾವವನ್ನು ಮೂಡಿಸಲು ಸ್ವ–ಉದ್ಯೋಗ ಸಂಘಗಳ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಇದರಿಂದ ಮಹಿಳೆಯರಲ್ಲಿ ಸ್ವಾವಲಂಬನೆ ಬೆಳೆಯಿತು. ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರವು ಮಹಿಳೆಯರ ಉದ್ಧಾರದಿಂದಲೇ ಸಮಾಜಕ್ಕೆ ಹಿತ ಎಂದು ತಿಳಿದು ಮಹಿಳೆಯರಿಗಾಗಿಯೇ ಕೆಲವು ಕಾರ್ಯಕ್ರಮಗಳನ್ನು ಜಾರಿಗೆತಂದಿದೆ. ಆರ್ಥಿಕ ಭದ್ರತೆಗಾಗಿ 'ಗೃಹಲಕ್ಷ್ಮಿ', 'ಗೃಹಜ್ಯೋತಿ' 'ಶಕ್ತಿ' ಮುಂತಾದ ಯೋಜನೆಗಳನ್ನು ಜಾರಿಗೆತಂದಿದೆ. ಇದರಿಂದ ಸ್ತ್ರೀಯರು ಪುರುಷರ ಮೇಲೆ ಅವಲಂಬಿತವಾಗದೇ ಸ್ವಾವಲಂಬಿಗಳಾಗಿ ಜೀವನ ನಡೆಸಲು ಸಹಕಾರಿಯಾಗಿದೆ. ರಾಜಕೀಯ ಕ್ಷೇತ್ರದಲ್ಲಿದ್ದ ಮೋಟಮ್ಮ ಅವರು ಮಹಿಳೆಯರ ಮೇಲೆ ನಡೆಯುತ್ತಿದ್ದ ಶೋಷಣೆ, ದಬ್ಬಾಳಿಕೆ, ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿದ್ದಾಗ ಪುರುಷ ಕೇಂದ್ರಿತ ಸಮಾಜದಲ್ಲಿ ಹಲವಾರು ಕಷ್ಟದ ಸವಾಲುಗಳನ್ನು ಎದುರಿಸಬೇಕಾಯಿತು. ರಾಜಕೀಯದಲ್ಲಿ ಪ್ರಾಮಾಣಿಕತೆ ಮತ್ತು ಕರ್ತವ್ಯನಿಷ್ಠೆಯೂ ಮುಖ್ಯವಾಗಿರಬೇಕು. ಈ ಎರಡನ್ನು ಪಾಲಿಸಿಕೊಂಡು ನಿರಂತರ ಶ್ರಮ, ಅನುಭವವನ್ನು ಪಡೆಯುತ್ತ ರಾಜಕೀಯದಲ್ಲಿ ಉತ್ತುಂಗಕ್ಕೆ ಏರಬಹುದು. ನಮ್ಮ ಜೀವನದಲ್ಲಿ ಯಾವುದೇ ಕ್ಷೇತ್ರದಲ್ಲಾದರೂ ಗುರಿಯನ್ನು ಸಾಧಿಸಲು ಪ್ರಾಮಾಣಿಕತೆಯು ಬಲವಾದ ಅಡಿಪಾಯವಿದ್ದಂತೆ. ಈ ರೀತಿಯ ಬಲವಾದ ಅಡಿಪಾಯದ ಮೇಲೆ ನಿಂತಿರುವವರು ಮೋಟಮ್ಮ. ಇವರು ತಮ್ಮ ಪ್ರಾಮಾಣಿಕತೆಯನ್ನು ರಾಜಕೀಯದಲ್ಲಿ ಅಸ್ತ್ರವಾಗಿ ಬಳಸಿಕೊಂಡು ಶತ್ರುಗಳ ಪಿತೂರಿಯನ್ನು ವಿಚಾರವಂತಿಕೆಯಿಂದ ಎದುರಿಸುತ್ತಿದ್ದರು. ಚಿಕ್ಕಮಗಳೂರು ಜಿಲ್ಲೆಯಲ್ಲಿ 1991ರಲ್ಲಿ ದೇವರಗುಡ್ಡ ಎಂಬಲ್ಲಿದ್ದ ಸರ್ಕಾರಿ ಜಮೀನನ್ನು ಕೆಲವು ಕುಟುಂಬದವರ ಒತ್ತುವರಿ ಮಾಡಿಕೊಂಡಿದ್ದರು. ಆ ಸಂದರ್ಭದಲ್ಲಿ ಬೀಜ ಬಿಟ್ಟ ಕಾಫಿ ಗಿಡಗಳನ್ನು ಕಡಿದು ಹಾಕಿದ್ದಾರೆ. ಇದಕ್ಕೆ ಮೋಟಮ್ಮ ಅವರೇ ಕಾರಣ. ಅವರ ಆದೇಶದ ಮೇರೆಗೆ ಅರಣ್ಯ ಇಲಾಖೆ ಇಂಥ ಮನೆ ಹಾಳು ಕೆಲಸ ಮಾಡಿದೆ ಎಂಬ ವದಂತಿ ಎಲ್ಲಾಕಡೆ ಹಬ್ಬಿತು. ಇದರ ವಿರುದ್ಧವಾಗಿ ಪ್ರತಿಭಟನೆಗೆ ಅಲ್ಲಿನ ಜನರುಕರೆಕೊಟ್ಟರು. ಆದರೆ ಇದರಲ್ಲಿ ಯಾವುದೇ ತಪ್ಪು ಮಾಡಿಲ್ಲದ ಮೋಟಮ್ಮ ಅವರು ತಮ್ಮ ಕಾಯಕ ಮತ್ತು ಪ್ರಾಮಾಣಿಕತೆಯ ಮೇಲೆ ನಂಬಿಕೆ ಇಟ್ಟಿದ್ದರು. ಯಾರು ತಪ್ಪು ಮಾಡಿದ್ದಾರೋ ವಿಚಾರಣೆಯ ಮೂಲಕ ಸಾಬೀತಾಗಲಿ ಎಂದು

ಉತ್ತರಿಸಿದರು. ವಿಚಾರಣೆಯನ್ನು ಕೈಗೊಂಡ ಕಮಿಟಿಯು ಮೋಟಮ್ಮ ಅವರನ್ನು ನಿರ್ದೋಷಿ ಎಂದು ಹೇಳಿತು. ಈ ಘಟನೆಯ ನಂತರ ಮೋಟಮ್ಮ ಅವರು 'ಪ್ರಾಮಾಣಿ ಕತೆ ರಾಜಕಾರಣಿ' ಎಂಬ ಹೆಮ್ಮೆಯ ಹಣೆ ಪಟ್ಟಿಯೊಂದಿಗೆ ರಾಜ್ಯ ರಾಜಕೀಯದಲ್ಲಿ ಮಾದರಿಯಾಗಿ ಮುಂದುವರಿದರು.

ಬದುಕಿಗೆ ಗುರಿಯ ಜೊತೆ ಕನಸನ್ನು ಹೊಂದಿರಬೇಕು. ಕನಸನ್ನು ನನಸಾಗಿಸುವುದೇ ಗುರಿಯಾಗಿರುತ್ತದೆ. ಅದಕ್ಕೆ ಮಾನಸಿಕವಾಗಿ ಸದೃಢವಾಗಿರಬೇಕು. ದಿಟ್ಟತನ, ದಕ್ಷತೆ, ಪ್ರಾಮಾಣಿಕತೆಯಿಂದ ಯಶಸ್ಸನ್ನು ಗಳಿಸಲು ಸಾಧ್ಯ ಎಂಬುದು ಮೋಟಮ್ಮ ಅವರೇ ನಿದರ್ಶನ. ಮೋಟಮ್ಮ ಅವರು 1978ರಲ್ಲಿ ಎಂ.ಎಲ್.ಎ ಆಗಿ ಆಯ್ಕೆಯಾದರು. ನಂತರ 1989ರಲ್ಲಿ ಎರಡನೇ ಬಾರಿ ಎಂ.ಎಲ್.ಎ ಆಗಿ ಹಾಗೂ ಮೂರನೇ ಬಾರಿ 1999ರಲ್ಲಿ ಎಂ.ಎಲ್.ಎ ಆಗಿ ಮೂಡಿಗೆರೆ ಕ್ಷೇತ್ರದಿಂದ ಆಯ್ಕೆಯಾದರು. ಮೊದಲ ಬಾರಿಗೆ 1999ರಲ್ಲಿ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆಯಾಗಿ ನೇಮಕವಾದರು. 2006 ಮತ್ತು 2012ರಲ್ಲಿ ಎರಡು ಬಾರಿ ಎಂ.ಎಲ್.ಸಿ ಆಗಿ ಆಯ್ಕೆಯಾಗಿ 2010ರಲ್ಲಿ ವಿಧಾನ ಪರಿಷತ್ತಿನಲ್ಲಿ ವಿರೋಧಪಕ್ಷದ ನಾಯಕಿಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

'ಜೀವನ ಸಂಧ್ಯಾ ವೃದ್ಧಾಶ್ರಮ' ಮತ್ತು 'ಆಶಾಕಿರಣ ಅಂಧ ಮಕ್ಕಳ ಶಾಲೆ'ಗೆ ಅನುದಾನವು ಸಿಗದೆ ಇದ್ದ ಸಂದರ್ಭದಲ್ಲಿ ಇಲಾಖೆಯ ಮೂಲಕ ಅನುದಾನ ಸಿಗುವಂತೆ ಮಾಡಿದರು. ಇದರಿಂದ ವಿಕಲಚೇತನ ಮಕ್ಕಳ ಜೀವನ ಸುಧಾರಿಸಿತು. ಅವರಿಗೆ ಬಸ್ ಪಾಸ್ ಕೊಡಿಸಿದರು. ಮಾಸಾಶನದ ಹಣವನ್ನು ಏರಿಕೆ ಮಾಡಿದರು. ಅವರು ಸಮಾಜದಲ್ಲಿ ಆತ್ಮವಿಶ್ವಾಸದಿಂದ ಬದುಕಲು ಅನುವು ಮಾಡಿಕೊಟ್ಟರು. 1993ರಿಂದ 1994ರ ವರೆಗೆ 'ಮಲೆನಾಡುಅಭಿವೃದ್ಧಿ ಮಂಡಲಿ'ಯ ಅಧ್ಯಕ್ಷೆಯಾದರು.ಈ ಸಂದರ್ಭದಲ್ಲಿ ಮೂವತ್ತೈದು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿ ರಸ್ತೆ ಸಂಪರ್ಕ, ಸೇತುವೆ ನಿರ್ಮಾಣದಂತಹ ಹಲವಾರು ಯೋಜನೆಗಳನ್ನು ಮಾಡಿದರು. 'ಆರಾಧನಾ' ಯೋಜನೆಯಡಿಯಲ್ಲಿ 36,000 ದೇವಾಲಯಗಳ ಪುನರುತ್ಥಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಯೋಜನೆಯನ್ನು ಪ್ರಸ್ತುತ ಕೇಂದ್ರ ಸರ್ಕಾರ 'ಸ್ಕಿಲ್ ಇಂಡಿಯಾ' ಎಂಬ ಹೆಸರಿನಲ್ಲಿ ಉದ್ಯೋಗವಿಲ್ಲದ ಯುವಕರಿಗೆ ಕೌಶಲ್ಯ ತರಬೇತಿಯನ್ನು ನೀಡುತ್ತಿದೆ. ಈ ಯೋಜನೆಗಳು ಸಾಮಾಜಿಕವಾಗಿ ಜನಸಾಮಾನ್ಯರಿಗೆ ಉಪಯೋಗವಾಗುತ್ತಿದ್ದ ಹೊಸ ಯೋಜನೆಯನ್ನು ಅಭಿವೃದ್ಧಿ ಮಾಡಬೇಕಾದ ಕರ್ತವ್ಯ ಪ್ರಸ್ತುತ ಸರ್ಕಾರಕ್ಕಿದೆ.

ಹೀಗೆ ಗೊಂದಲದ ಮನಸ್ಸಿನಿಂದ ರಾಜಕೀಯ ಪ್ರವೇಶ ಮಾಡಿದ ಮೋಟಮ್ಮ ಅವರ ರಾಜಕೀಯ ಸಾಧನೆಯ ಗುರಿಯೂ ಸ್ಪಷ್ಟವಾಗಿತ್ತು. ಸಿಕ್ಕ ಅವಕಾಶವನ್ನು ಒಳ್ಳೆಯ ಕೆಲಸಕ್ಕೆ ಉಪಯೋಗಿಸಿಕೊಂಡರು. ರಾಜಕೀಯದಲ್ಲಿ ಬೆಳೆಯಬೇಕೆಂದರೆ ಮಿತ್ರರು ಹಾಗೂ ಶತ್ರುಗಳಿಂದ ಅನುಭವದ ಪಾಠ ಕಲಿತಾಗ ನಕಾರಾತ್ಮಕ, ಸಕಾರಾತ್ಮಕ ಆಲೋಚನೆ ಮತ್ತು ಕೆಲಸದ ಬಗ್ಗೆ ಅರಿವಾಗುತ್ತದೆ. ತಮ್ಮದೇ ಪಕ್ಷದವರ ಟೀಕೆಗಳು ಮತ್ತು ವಿರೋಧವನ್ನು ಎದುರಿಸಬೇಕಾಗುತ್ತದೆ ಸಾಮಾನ್ಯವಾಗಿ ಲಿಂಗ ತಾರತಮ್ಯವು ಕೌಟುಂಬಿಕ ಆದಿಯಾಗಿ ಸಮಾಜದ ಎಲ್ಲಕಡೆಯೂ ಹೆಣ್ಣನ್ನು ಶೋಷಣೆಗೆ ಗುರಿ ಮಾಡುತ್ತದೆ. ರಾಜಕೀಯ ಕ್ಷೇತ್ರವು ಇದಕ್ಕೆ ತೀರ ಹೊರತೇನಿಲ್ಲ. ಇಲ್ಲಿಯೂ ತಾರತಮ್ಯ, ಶೋಷಣೆ, ದೌರ್ಜನ್ಯ ಮುಂತಾದ ಪಿಡುಗುಗಳು ಹೆಣ್ಣನ್ನು ಪೀಡಿಸುತ್ತವೆ. ಇದೆಲ್ಲವನ್ನು ಸವಾಲಾಗಿಯೇ ಎದುರಿಸಿದ ಮೋಟಮ್ಮ ಅವರು ಪ್ರತಿಯೊಂದು ಸವಾಲುಗಳನ್ನು ತಮ್ಮ ರಾಜಕೀಯ ಜೀವನದ ಯಶಸ್ಸಿನ ಹಾದಿಯ ಮೆಟ್ಟಿಲುಗಳಾಗಿ ರೂಪಿಸಿಕೊಂಡರು.

ಪ್ರಸ್ತುತದಲ್ಲಿ ಮಹಿಳೆಯರ ಸಾಧನೆಗಳನ್ನು ಎಲ್ಲಾ ಕ್ಷೇತ್ರಗಳಲ್ಲೂ ಕಾಣಬಹುದು. ಪುರುಷಕೇಂದ್ರಿತ ಮುಷ್ಟಿಯಿಂದ ದೂರವಾಗಿ ಸ್ವ–ಇಚ್ಛೆಯಿಂದ ಕೆಲಸ ಮಾಡುವುಜರ ಜೊತೆಗೆ ಯಶಸ್ವಿಯಾಗುವುದು ಸುಲಭದ ಮಾತಲ್ಲ. ಆದರೆ ರಾಜಕೀಯ ಕ್ಷೇತ್ರವೂ ಸಾಧನೆಯ ಜೊತೆಗೆ ಸಮಾಜ ಸೇವೆಯನ್ನು ಮಾಡಲು ಉತ್ತಮ ವೇದಿಕೆಯಾಗಿದೆ. ಮಹಿಳೆ, ಪುರುಷ ಎಂಬ ಯಾವುದೇ ಲಿಂಗ ತಾರತಮ್ಯವಿಲ್ಲದೆ ಎಲ್ಲರೂ ಸಮಾನವಾಗಿ ಸೇವೆ ಮಾಡಲು ಅನುಕೂಲವಾಗುವಂತಹ ಕ್ಷೇತ್ರವೇ ರಾಜಕೀಯ ಕ್ಷೇತ್ರ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಸಿದ್ಧಾಂತಗಳು ಸಾಮಾಜಿಕ, ಸಾಂಸ್ಕೃತಿಕ, ಶೈಕಣಿಕ ಕ್ಷೇತ್ರಗಳನ್ನು ನಿಯಂತ್ರಿಸುವ ಶಕ್ತಿಯುಳ್ಳದ್ದು. ಬಹುಮತ ಪಡೆದು ಸರ್ಕಾರ ರಚಿಸಿದ ಪಕ್ಷಗಳ ಕಾರ್ಯಸೂಚಿಗಳಾಧಾರಿತವಾಗಿ ಕೆಲವೊಮ್ಮೆ ಕಾನೂನುಗಳು ರಚಿತವಾಗುತ್ತವೆ. ಇನ್ನೂ ಕೆಲವೊಮ್ಮೆ ಜನಪರ ಕಾರ್ಯಗಳನ್ನು ಕುರಿತಂತೆ ರಚಿತವಾದ ಯೋಜನೆಗಳು ಸಮರ್ಥ ನಾಯಕತ್ವದ ಕೊರತೆಯಿಂದಲೋ ಅಥವಾ ಮಧ್ಯವರ್ತಿಗಳ ಹಾವಳಿಯಿಂದಲೋ ವಿಫಲವಾದ ಸನ್ನಿವೇಶಗಳು, ಸಂಗತಿಗಳು ಇವೆ. ಆದ್ದರಿಂದ ರಾಜಕೀಯ ಎನ್ನುವುದು ಯಾವುದೇ ದೇಶದ ಅಥವಾ ಯಾವುದೇ ಪ್ರದೇಶದ ಜನರ ಅಭಿವೃದ್ಧಿಯ ಮಾದರಿಯಾಗಿ ನಿಂತಾಗ ಅಲ್ಲಿ ಜನಸೇವೆಯೇ ಮುಖ್ಯಧ್ಯೇಯವಾಗಿರುತ್ತದೆ. ಒಂದು ಜನಾಂಗದ ಅಥವಾ ಒಂದು ವರ್ಗದ ಹಿತಾಸಕ್ತಿಗಾಗಿ ತೊಡಗಿದಾಗ ಅಸಮತೋಲನವುಳ್ಳ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗುತ್ತದೆ. ಇದರಿಂದ ಅಸಮಾನ ಸಮಾಜಕ್ಕಾಗಿ ಮತ್ತೊಂದು ವರ್ಗ ಬೇಸತ್ತು ಸಾಮಾಜಿಕ ನ್ಯಾಯದ ಹೋರಾಟಕ್ಕೆ ಅವಕಾಶ ಕೊಡುತ್ತದೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಇರುವ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಒಂದು ಜಾಣ್ಮೆಯೇ ಆಗಿದೆ. ಜನರ ನಡುವೆ ಬೆಳೆದ ವ್ಯಕ್ತಿಗೆ, ಜನರಿಗೆ ಅಗತ್ಯವಾಗಿ ಬೇಕಾಗಿರುವ ಸವಲತ್ತುಗಳ ಬಗ್ಗೆ ಧ್ವನಿ ಎತ್ತುವ ಮೂಲಕ ಆ ಬಗ್ಗೆ ಗಮನ ಸೆಳೆಯುತ್ತಾರೆ.

ಒಟ್ಟಾರೆ ಮೋಟಮ್ಮನವರ ಜೀವನ ಪ್ರಾರಂಭದಿಂದಲೂ ಒಂದು ರೀತಿಯ ಸಮತೋಲಿತವಲ್ಲದ್ದು. ಕಾರಣ ಹುಟ್ಟಿದ ಮಗು ಗಂಡಲ್ಲ ಎಂಬ ಕಾರಣಕ್ಕೆ ಲಿಂಗ ತಾರತಮ್ಯ ಎದುರಿಸಿದರು. ರಾಜಕೀಯ ಪ್ರವೇಶವನ್ನು ಸ್ವಇಚ್ಛೇಯಿಂದಾಗದೆ ಪರರ ನಿರ್ಧಾರದಿಂದ ರಾಜಕೀಯ ಪ್ರವೇಶವಾದರು. ಅದಾಗ್ಯೂ ಒಳ್ಳೆಯ ರಾಜಕೀಯ ಪಟುವಾಗಿ ಸ್ತ್ರೀ ಏಳಿಗೆಯೊಂದಿಗೆ ಮಾದರಿಯಾದರು. ಪಕ್ಷಾತೀತವಾದಾಗಲೇ ಒಬ್ಬ ಹೆಣ್ಣು ಒಂದು ಯೋಜನೆಯ ಕಣ್ಣಾಗಿ ಶಕ್ತಿ ತುಂಬಲು ಸಾಧ್ಯ. ಈಗಾಗಿ ಮೋಟಮ್ಮ ಬರಿ ಹೆಸರಲ್ಲದೇ ಅವರು ರಾಜಕೀಯದಲ್ಲೊಂದು ಶಕ್ತಿಯಾದರು.

**ಆಕರ ಗ್ರಂಥ**


- ವೀರಣ್ಣಕಮ್ಮಾರ (ನಿರೂಪಣೆ). (2022). *ಶ್ರೀಮತಿ ಮೋಟಮ್ಮರವರ ಆತ್ಮಕಥನ–ಬಿದಿರು ನೀನ್ಯಾರಿಗಲ್ಲದವಳು*. ವಿಕಾಸ ಪ್ರಕಾಶನ.